CC No.853/2018
PW-1

**<u>ದಿನಾಂಕಃ 18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ.ಸಿ.ಎಂ.ಕೆ. ವಕೀರಿಂದ**

**1)** ಚುನಾವಣಾ ನಿಮಿತ್ತ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ತಡೆಗಟ್ಟಲು ಫ್ಲೈಯಿಂಗ್ ಸ್ವಾಡ್ ಅನ್ನು ನೇಮಕ ಮಾಡಿ ಒಂದೊಂದು ಟೀಮಿಗೂ ಒಬ್ಬೊಬ್ಬ ಫೋಟೋಗ್ರಾಫರ್, ಒಬ್ಬೊಬ್ಬ ಪೊಲೀಸ್ ಸಹಾಯಕರಾಗಿ ನೇಮಕ ಮಾಡಿರುತ್ತಾರೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಲಾದ ದಿನ ತಮ್ಮ ಟೀಮ್ ನೊಂದಿಗೆ ಯಾವ ಹೆಸರಿಗೆ ಪೊಲೀಸ್ ಅಧಿಕಾರಿ ಇದ್ದರು ಎಂದರೆ ಸಾಕ್ಷಿ ಕರಿಯಪ್ಪ ಎನ್ನುತ್ತಾರೆ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ತಮ್ಮ ಜೊತೆ ಫೋಟೋಗ್ರಾಫರ್ ಇದ್ದರಾ ಎಂದರೆ ಸಾಕ್ಷಿ ಇದ್ದರು ಆದರೆ ಯಾವುದೇ ಫೋಟೋ ಅಥವಾ ವಿಡಿಯೋ ಮಾಡಿಲ್ಲ ಎನ್ನುತ್ತಾರೆ. ಒಂದೊಂದು ಫ್ಲೈಯಿಂಗ್ ಸ್ವಾಡ್ ಟೀಮ್ ಗೆ ಸರ್ಕಾರಿದಿಂದ ಪ್ರತ್ಯೇಕ ವಾಹನ ನೀಡುತ್ತಾರೆ ಎಂದರೆ ಸರಿ. ಸದರಿ ಘಟನೆ ನಡೆಯಿತು ಎಂದು ಹೇಳಲಾದ ದಿನ ನಿಮ್ಮ ಟೀಮ್ ಗೆ ಯಾವ ನಂಬರಿನ ವಾಹನ ಮತ್ತು ಅದಕ್ಕೆ ಯಾರು ಚಾಲಕರಾಗಿ ನೇಮಕ ಆಗಿದ್ದರು ಎಂದು ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ. ತಮ್ಮ ಹೇಳಿಕೆಯಲ್ಲಿ ಏನಾದರೂ ವಾಹನದ ನಂಬರ್ ಮತ್ತು ಚಾಲನಕ ಹೆಸರು ನಮೂದಿದೆಯೇ ಎಂದರೆ ಇಲ್ಲ ಎನ್ನುತ್ತಾರೆ. ತಾವು ಇಂತಿತ್ತ ದಿನ ಇಂತಹ ಸ್ಥಳಕ್ಕೆ ಕರ್ತವ್ಯದ ನಿಮಿತ್ತ ಹೋಗಿದ್ದೆವು ಎಂದು ತೋರಿಸಲು ಮೊಮೆಂಟ್ ರಿಜಿಸ್ಟರ್ ನಲ್ಲಿ ನಮೂದು ಮಾಡಿದ್ದೀರಾ ಎಂದರೆ ನೆನಪಿಲ್ಲ ಎನ್ನುತ್ತಾರೆ. ನಮ್ಮಫ್ಲೈಯಿಂಗ್ ಸ್ಕಾಡ್ ನ ಮುಖ್ಯಾಧಿಕಾರಿ ಚಾಸಾ-1 ರವರು ಮೊಮೆಂಟ್ ರಿಜಿಸ್ಟರ್ ಹೊಂದಿದ್ದ ಬಗ್ಗೆ ತಮಗೆ ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ.

2) ನಾನು ಘಟನೆ ನಡೆಯಿತು ಎನ್ನಲಾದ ದಿನ ಘನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನಲಾದ ದಿನ ನಾನು ಫ್ಲೈಯಿಂಗ್ ಸ್ವಾಡ್ ಟೀಂ ನಲ್ಲಿ ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಕೇಸಿನ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಆರೋಪಿ ಘಟನಾ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.